Regd No M 1 [illegible]

43rd Year | Sri 'Satyavadi' Mysore

19-2-1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಕಂಗಳಿಗೆ 6 ಆಣೆ

# ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸಂಪಾದಕರು— ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

# ಹಾಸನ – ಮಂಗಳೂರು ರೈಲ್ವೆ ನಿರ್ಮಾಣ ಕೇಂದ್ರದ ಪರಿಶೀಲನೆಯಲ್ಲಿ

## ವರ್ಣಭೇದ ಹೋಗುವುದು

ಮದರಾಸು 18 — ಅಮೇರಿಕಾದ ನೀಗ್ರೊ ನಾಯಕರಾದ ರೆ|| ಡಾ|| ಮಾರ್ಟಿನ್ ಲೂಥರರು ಇಲ್ಲಿ ಹೇಳಿಕೆಯಿತ್ತು ಕಾನೂನು ಜಾರಿ ಮೂಲಕ ಇಂದಿನಿಂದ ಇನ್ನು ಹತ್ತು ವರ್ಷಗಳಲ್ಲಿ ದಕ್ಷಿಣ ಸಂಸ್ಥಾನಗಳಲ್ಲಿ ವರ್ಣಭೇದ ಹೋಗಿರುವುದಾಗಿ ನುಡಿದರು.

## ಜನಕ್ಕಿಂತ ಇಲಿ ಹೆಚ್ಚು

ನವದೆಹಲಿ 18 — ದೇಶದಲ್ಲಿ ಇನ್ನೂರಕ್ಕೆ ತ್ತು ಕೋಟಿ ಇಲಿಗಳಿರುವುದಾಗಿ ರಾಜ್ಯಸಭೆಯಲ್ಲಿ ಆಹಾರಾಧಾನ್ಯ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ತಿಳಿಸಿದರು.

## ಅಣು ಪ್ರಯೋಗ

ಮೆಲ್ಬೋರ್ನ್ 18 — ಆಸ್ಟ್ರೇಲಿಯಾದ ವೂಮೆರಾ ರಾಕೆಟ್ ಪ್ರದೇಶದಲ್ಲಿ ಬ್ರಿಟನ್ನಿನ ಇತ್ತೀಚಿನ ಅತ್ಯಂತ ರಹಸ್ಯದ ಅಣುಬಾಂಬು ಸ್ಪಾಂಡಾಫ್ ಪ್ರಯೋಗದಲ್ಲಿದೆ.

## ಧರ್ಮ

17 — ಪ್ರಜಾ ಸೋ
ಕ್ರಾಂತಿಕಾರಿ ಸೋಷ
ಪೂರು 5 ನೂರು
ಪಾರ್ಲಿಮೆಂಟು
ಮಾಡಿ ಅ
ಶ್ರೀ [illegible]ರು ಮಂತ್ರಿ
ಂದ ತೆಗೆಯಲ್ಪಡಬೇಕೆಂದು,
ಾತ್ಮು ಅವರ ಅಡಳಿತದ
ಾಂಗ ವಿಚಾರಣೆ ನಡೆಯು
ಕೆಂದು ಒತ್ತಾಯ ಮಾಡಿದರು.

[illegible] 18 — ವಿಧಾನಸಭೆ
[illegible] ರಾಜ್ಯಪಾಲ
[illegible]ದರು.

## ಕೆಲಸಗಾರರಿಗೆ ಕೊಂದರೆ

ಬೆಂಗಳೂರು 18 — ಕೈಗಾರಿಕೆ ಕಲಹವಲ್ಲದ ಇತರ ಕಾರಣಗಳಿಗೆ ಮೈಸೂರು ಪ್ರಾಂತದ ಒಟ್ಟೆ ಗಿರಣಿಯಲ್ಲದ 18 ಕಾರ್ಖಾನೆಗಳು ಒಂದಾಗಿ 578 ಕೆಲಸಗಾರರಿಗೆ ಕೊಂದರೆ ಆಗಿದೆ

## ದಂಡನೆ

1958 ನೆಯ ಡಿಸೆಂಬರು 31 ಕ್ಕೆ ಆದ 3 ತಿಂಗಳಿನಲ್ಲಿ ಓರ್ವ ಎಕ್ಸಿಕ್ಯುಟಿವ್ ಇಂಜಿನಿಯರು ಮತ್ತು ಓರ್ವ ಮಹಿಳಾ ಆಸಿಸ್ಟೆಂಟು ಸೇರ್ಜನರು ಸೇರಿ 20 ಅಧಿಕಾರಿಗಳಿಗೆ ದಂಡನೆಯಾಗಿದೆ ಎಂದು ರಕ್ಷಣ ಉಡಳಿತ ವಂದಿ ತಿಳಿಸಿದೆ ಎಂದು ಬೆಂಗಳೂರು ವಾರ್ತೆ

## ಹಿತೋಕ್ತಿ

ಬೆಂಗಳೂರು ಶ್ರೀ ರೇಣುಕಾಚಾರ್ಯ ಕಾಲೇಜು ಸಂಘದ ಸಮಾಪ್ತ ಭಾಷಣವನ್ನು ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ನೆರೆವೇರಿಸುತ್ತಾ, ಜೀವನದ ತಮ್ಮ ಆಶಯವನ್ನು ಪೂರ್ಣಗೊಳಿಸಲು ಕಷ್ಟಪಟ್ಟು ಕೆಲಸ ಮಾಡಬೇಕೆಂದು ತಿಳಿಸಿದರು

## ಬಿಕ್ಕಟ್ಟು

ಜಿನೀವಾ 18 — ಅಣು ಶಸ್ತ್ರ ನಿಷೇಧದ ಬಗ್ಗೆ ಮೂರು ರಾಷ್ಟ್ರಗಳಲ್ಲಿ ನಡೆಯುತ್ತಿರುವ ಮಾತುಕತೆಗಳಲ್ಲಿ ಬಿಕ್ಕಟ್ಟುಂಟಾಗಿದೆ.

## ಐಕ್ ಎಚ್ಚರಿಕೆ

ವಾಷಿಂಗ್ಟನ್ 13 — ಬರ್ಲಿನ್ನಿನಲ್ಲಿ ಬಲವೇನಾದರೂ ಉಪಯೋಗವಾದಲ್ಲಿ ಮತ್ತೊಂದು ಕಡೆಯವರು ಉಪಯೋಗಿಸುವರೆಂದು ಅಧ್ಯಕ್ಷ ಐಸೆಹೋವರ್ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ನವ ದೆಹಲಿ 18 — ಮಂಗಳೂರು-ಹಾಸನ ದಿವ-ದಸಗೋರ್ವ ಮತ್ತು ಪಥಾರಕಂಡಿ-ಧರ್ಮಸಗಂ ರೈಲ್ವೆ ಮಾರ್ಗ ನಿರ್ಮಾಣ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಕೇಂದ್ರ ರೈಲ್ವೆ ಮಂತ್ರಿ ಶ್ರೀ ಜಗಜೀವನರಾಂರವರು 59-60 ನೆ ಸಾಲಿನ ರೈಲ್ವೆ ಅಂದಾಜಪಟ್ಟಿ ಮಂಡಿಸುತ್ತಾ ತಿಳಿಸಿದರು. ಲೋಕಸಭೆಯಲ್ಲಿ ಮುಂದೆ ಅವರು, ರೂ. 91.19 ಕೋಟಿ ಉಳುವರಿ ಅಂದಾಜುಪಟ್ಟಿ ಮಂಡಿಸಿದರು ಮೈಸೂರು ಪ್ರಾಂತದಲ್ಲಿ 7 ರೈಲ್ವೆ ನಿರ್ಮಾಣಗಳುಂಟು ರೈಲ್ವೆ ದರಗಳಲ್ಲಿ ಏನೂ ವ್ಯತ್ಯಾಸವಿಲ್ಲ

## ಕಾಂಬೋಡಿಯಾಕ್ಕೆ ಭೇಟಿ

ನವ ದೆಹಲಿ 18 — ಮಾರ್ಚ್ 15 ನೆಯ ತಾ|| ನಿಂದ 18 ರ ವರಿಗೆ ಭಾರತದ ಅಧ್ಯಕ್ಷರಾದ ಡಾ|| ರಾಜೇಂದ್ರಪ್ರಸಾದರು ಕಾಂಬೋಡಿಯಾ ಪ್ರವಾಸ ಕೈಗೊಳ್ಳುವರು

## ಪರಿಶೀಲನೆ ಅಗತ್ಯ

ನವದೆಹಲಿ 18 — ಪಶ್ಚಿಮ ಬಂಗಾಳದಿಂದ ಬೆರು ಬಾರಿಯನ್ನು ಪೂರ್ವ ಪಾಕಿಸ್ತಾನಕ್ಕೆ ವರ್ಗಾವಣೆ ಮಾಡುವ ಬಗ್ಗೆ ಮರುಪರಿಶೀಲನೆ ನಡೆಯಬೇಕೆಂದು ಪಶ್ಚಿಮ ಬಂಗಾಳ ಸದಸ್ಯರು ಲೋಕಸಭೆಯಲ್ಲಿ ಒತ್ತಾಯ ಮಾಡಿದರು

## ನಿಂತಿಲ್ಲ

ಕರೀಂಗಂಜ್ 19 — ಭಾರತ ಕಡೆ ಒಂದೇ ಸಮನಾಗಿ ಪಾಕಿಸ್ತಾನ ವೈಮಾನಿಕ ಹಾರಿಸುತ್ತದೆ

## ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

20 ದ್ವಾದಶಿ ಪುನರ್ವಸು

## ಫಾಸ್ಯ ಮಾದಾಟಿಗರಿಗೆ ಸೂಚನೆ

ಜೊಗಳೂರಿಂದ ನಿನ್ನೆ ಪ್ರಕಟವಾದ ಸರ್ಕಾರದ ಪತ್ರಿಕೆ ಪ್ರಕಟಣೆಯಂತೆ ಅವುದು- ಮಾಡಿಕೊಂಡ ಫಾಸ್ಫೇಟ್ ಪ್ರಾಂವಸ್ಥ ಸಗಾಗಲೇ ಕೈಗಾರಿಕೆ ಮಾಡಲೇ ಆಹಾರ ಸ್ಟೆರಿಟ್ ದ್ದು ಜಿಲ್ಲಾಧಿಕಾರಿಗಳು ಅಥವಾ ಅಸಿಸ್ಟೆಂಟು ಆಹಾರ ಸ್ಟೆಕ್ಟರಿಂದ ಅಗತ್ಯ ಅನುಕೂಲ ಪಡೆಯಬೇಕೆಂದು ತಿಳಿಸಿದೆ.

## ವಿವಿಧ ಉಪಯೋಗಗಳು

ಅಖಿಲ ಭಾರತ ದಂತ ವೈದ್ಯರ ಸಮ್ಮೇಳನ ಈ ದಿನದಿಂದ ಬೆಂಗಳೂರಿನಲ್ಲಿ ಆರಂಭವಾಯಿತು.

ಂ ಂ

ಖಟಮಂಡು 18 — ನೇಪಾಳದ ಖಟಮಂಡು ಕಣಿವೆಯಲ್ಲಿ ಜನರು ಮುಕ್ತ ಡಾನ ಮಾಡಿದರು.

ಂ ಂ

ಹೈದರಾಬಾದು 18 — ಸ್ವತಂತ್ರ ಕೂಟದ ಶ್ರೀ ಶ್ರೀನಿವಾಸರಾಯರು ಸತಿ ತನ ಡೆಮೋಕ್ರಾಟಿಕ್ ಕೂಟಕ್ಕೆ ಸೇರಿರುವರು

ಂ ಂ

ಕಲ್ಕತ್ತಾ 18 — ಭಾರತ ಆಕ್ರಮಣ ಮಾಡಿ ಪಾಕಿಸ್ತಾನ ಆಕ್ರಮಿಸಿಕೊಳ್ಳುವಷ್ಟು ದಡ್ಡನಲ್ಲ ಎಂದು ಎಂದು ಹ್ಯಾರಿಮನ್ ತಿಳಿಸಿದ್ದಾರೆ

ಂ ಂ

ವಾಷಿಂಗ್ಟನ್ 18 — ಜಾರ್ಜ್ ಫೋಸ್ಟರ್ ಡಲೆಸರಂಥವನುಷ್ಯರನ್ನು ಸಾಸು ಪ್ರಪಂಚದಲ್ಲೇ ನೋಡಿಲ್ಲ ಎಂದು ಅಧ್ಯಕ್ಷ ಐಸೆಹೋವರ್ ತಿಳಿಸಿದರು

ಂ ಂ

ಕೊಲಂಬೊ 18 — ಸಿಂಹಳಿಯ ನೂತನ ರಕ್ಷಣಾ ಮಂತ್ರಿಯ ಮೋಟಾರ್ ಕಾರಿಗೆ ನಿಷೇಧಿಸುವ ಭೀತಿ ಇದೆ.

## ಝಾಲಾಚಪಾಹಿಜೆಗಳ ಸೈತಾನಿ ಬೇಡಿಕೆ !

ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ತಮಗೆ ನ್ಯಾಯುವಾಗಿ ದೊರೆಯಬೇಕೆಂದು ಕೇಳುತ್ತಿರುವ ಗಡಿಯಲ್ಲಿಯ ಕನ್ನಡ ಊರುಗಳು ಯಾವುವು ಎಂಬುದನ್ನು ಒಂದು ನಕಾಶೆ ಮುದ್ರಿಸಿ ಪ್ರಸಿದ್ಧಿಪಡಿಸಿದ್ದಾರೆ : ಆದಂ ಕೆಳಗೆ ಪ್ರಕಾಶಕರು ಅಂತ ಬರೆಯುವಾಗ ಮಹಾರಾಷ್ಟ್ರ ಏಕೀಕರಣ ಸಮಿತಿ ಎಂದು ಮುದ್ರಿಸಲಾಗಿದೆ ; ಬೆಳಗಾವಿ ಜಿಲ್ಲೆಯಲ್ಲಿ ತಮಗೆ ದೊರೆಯಬೇಕಾದ ಪ್ರದೇಶವನ್ನು ಅವರು ಕೆಂಪು ಬಣ್ಣದಿಂದ ತೋರಿಸಿದ್ದು ಅವುಗಳಲ್ಲಿ ಸೇರಿಸಲಾದ ಕೆಲವು ಮಹತ್ವದ ಊರುಗಳನ್ನಷ್ಟೇ ಈ ನಕಾಶೆಯಲ್ಲಿ ಕಾಣಿಸಿದ್ದಾರೆ ; ಸಣ್ಣ ಹಳ್ಳಿಗಳನ್ನು ಅದಂಲ್ಲಿ ತೋರಿಲ್ಲ : ಅಥಣಿ, ಚಿಕ್ಕೋಡಿ, ರಾಯಭಾಗ, ಹುಕ್ಕೇರಿ ತಾಲ್ಲೂಕ, ಬೆಳಗಾವಿ, ಖಾನಾಪುರ ತಾಲ್ಲೂಕುಗಳಲ್ಲಿಯ ಯಾವ ಮಹತ್ವದ ಊರುಗಳು ತಮಗೆ ಬೇಕೆಂಬುದನ್ನು ದೊಡ್ಡ ಅಕ್ಷರಗಳಿಂದ ಈ ಕೆಂಪು ಬಣ್ಣದಲ್ಲಿ ತೋರಿಸಿದ್ದಾರೆ. .... .... ....

ರಾಮದುರ್ಗ, ಗೋಕಾಕ, ಅಥಣಿ, ಹುಕ್ಕೇರಿ, ಈ ಊರುಗಳಲ್ಲಿ ಸಹ ನೂಕ್ಕೆ ಎಂಡು ಅಥವಾ ಮೂರು ಜನ ಮಂತ್ರಿ ಮಾತನಾಡುವವರು ಹೊರಡುವಾಗ ಈ ಊರುಗಳನ್ನು ಇದರಲ್ಲಿ ಯಾಕೆ ಸೇರಿಸಲಿಲ್ಲವೆಂಬಬೊಂದು ಆಶ್ಚರ್ಯದ ಸಂಗತಿಯೇ ! ಅಥಣಿಯಲ್ಲಿ ಮಹಾರಾಷ್ಟ್ರ ಇನಾಂದಾರ ಮಂಗಳಸೂಳಿಕರ ವಾಡೇ ಇದೆ ; ರಾಮದುರ್ಗದಲ್ಲಿ ಅಂತೂ ಚಿತ್ಪಾವನ ಸಂಸ್ಥಾನಿಕರ ಅರಮನೆಯಿದೆ ; ಹುಕ್ಕೇರಿಯಲ್ಲಿ ಮುಸಲ್ಮಾನ ಬಾದಷಹರು ಕಟ್ಟಿಸಿದಕಾರಂಜಿ ಅವೆ : ಗೋಕಾಕದಲ್ಲಿ ಕೆಲವು ವಕೀಲರು ಕೊಂಕಣಸ್ಥರಿದ್ದಾರೆ, ಹೀಗಿದ್ದರೂ ಈ ಊರುಗಳನ್ನು ಬೇಡಿಕೆಯಲ್ಲಿ ಯಾಕೆ ಕೂಡಿಸಿಲ್ಲವೋ ತಿಳಿಯದಾಗಿದೆ : ನೂರಕ್ಕೆ ಮೂರು ನಾಲ್ಕು ಸಹ ಮಂತ್ರಿ ಭಾಷಿಕರು ಇರುವ ಗ್ರಾಮಗಳನ್ನೂ ಕೇಳುವ ನಿರ್ಲಜ್ಜ ರಾಕ್ಷಸ ಮಹತ್ವಾಕಾಂಕ್ಷೆಯ ಝಾಲಾಚಪಾಹಿಜೆಗಳಿಗೆ ಟಾಲಸಾಯನು ಕಡೆಯಲ್ಲಿ ಹೇಳಿದಂತೆ ಮಾತ್ರ ಸ್ಥಳ ಸಿಗುವುದು ನಿಶ್ಚಿತ ; ಜನ ಲಜ್ಜೆಯಿಲ್ಲದ ಮನಲಜ್ಜೆಯನ್ನು ತೇದು ಕುಡಿದು ಈ ಝಾಲಾಚಪಾಹಿಜೆಗಳಿಗೆ ಇನ್ನು ಉಸಲು ಮಾತ್ರ ಸಿಗುವುದು ಉಳಿದಿದೆ ; ಅದೂ ಸಿಗಲಾರದು.

ಜೋಲೋ ಝಾಲಾಚಾಪಾಹಿಜೆ ಕೀ ಜೈ ! ಎಲಿಹಡಗಲಿ, ಖಾನಾಪುರ ರಾಯಭಾಗ, ಕುಡಚಿ ಸಹಾ ಸಂಯುಕ್ತ ಮಹಾರಾಷ್ಟ್ರ ಝಾಲಾಚಪಾಹಿಜೆ !

### ದಿವ್ಯವಾಣಿ

ಪ್ರಜಾಪ್ರಭುತ್ವ ಸ್ಥಾಪಿಸಲು ನೀವು ಕ್ರಾಂತಿಹೊಂದಿರುವುದಿಲ್ಲ ; ಕ್ರಾಂತಿ ಪಡೆಯಲು ನೀವು ಪ್ರಜಾಪ್ರಭುತ್ವವನ್ನು ಹೊಂದಿರಲೇಬೇಕು.

— ಜಿ ಕೆ ಚೆಸ್ಟರ್ಟನ್

### ವಿವಾಹಮಹೋತ್ಸವ

ಸೌ || ಭ್ರಮರಾಂಬಾ ( ಮೈಸೂರು ದೇವರಾಜ ಮಾರ್ಕೆಟ್ಟಿನಲ್ಲಿರುವ ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್ ಮಾಲೀಕರಾದ ಶ್ರೀ ರೇವಣ್ಣಪವರ ಪುತ್ರಿ ) ಮತ್ತು ಚಿ || ಕೆ ಬಿ. ಚಂದ್ರಮೌಳಿ ( ಬೆಂಗಳೂರು ಗುರುಬಸವಾ ಸ್ಟೋರ್ಸ್ ಮಾಲೀಕರಾದ ಶ್ರೀ ಕೆ. ಎಸ್. ಬಸಪ್ಪನವರ ಪುತ್ರ ) ಇವರ ವಿವಾಹಮಹೋತ್ಸವವು ನಿನ್ನೇ ದಿವಸ ವೈಭವವಾಗಿ ನೆರವೇರಿತು.

Edited, Printed & Published by Dharma Prachara Nirata M S Krishna Rao at the Sri Lakshmi Printing Press Chamarajapuram, Mysore

**B. S. K. Rao**
High-class Gents Dress-Maker
Upadhyaya's Building
Sayyaji Rao Road
MYSORE



ಕಿಕ್ಕಿರಿದ ಜನಸಂದಣಿಗೆ
ಪ್ರದರ್ಶನವಾಗುತ್ತಿರುವ
**ವುಡ್‌ಲ್ಯಾಂಡ್ಸ್** ಯಶಸ್ವಿ 3 ನೇ ವಾರ
**ದಿಲ್ಲೀ – ಕ – ಥಗ್** (ಹಿಂದಿ)
ತಾರಾಗಣ - ನೂತನ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು
ನೀರಿನ ನೃತ್ಯಗಳು ಗೇವಾಕಲರಿನಲ್ಲಿ. — ನೋಡಲು ಮರೆಯದಿರಿ

**ಅಪೆರಾ** ಜಯಪ್ರದ 2 ನೇ ವಾರ
**ಚಂಚುಲಕ್ಷ್ಮಿ**
ಅಂಜಲಿದೇವಿ, ನಾಗೇಶ್ವರರಾವ್, ರಂಗರಾವ್, ಶಂಗವೇಲು ಇವರ ಸರೋಜ
ಪಾಶ್ಚವಹಿಸಿರುವ ಚಿತ್ರಾಕರ್ಷಕ ತಮಿಳು ಚಿತ್ರ | ಪ್ರತಿದಿನ 3 ಆಟಗಳು




1 ಫರ್ಮಿ ನ್ಯೂಕ್ಲಿಯರ್ ಶಕ್ತಿ ಹೆಚ್ಚು ಮೊತ್ತಕ್ಕೆ ಪ್ರವಹನೆ ಸಂತೋಧನೆಗಾಗಿ ನೋಬಲ್ ಪ್ರೈಸ್ ಪಡೆದರು.

2 ನೋಬಲ್ ಪ್ರೈಸು ಪಡೆದನಂತರ ಫರ್ಮಿ ಕೊಲಂಬಿಯಾ ಲಯದ ಪ್ರೊಫೆಸರಾಗಲು ತನ್ನ ಹೆಂಡತಿ ಮಕ್ಕಳೊಡನೆ ಕಡಗಿನಲ್ಲಿ ಪ್ರ ಮಾಡಿದರು.

3 ಫರ್ಮಿ ಅಮೇರಿಕಾಕ್ಕೆ ಬಂದೊಡನೆ, ಜರ್ಮನ್ ವಿಜ್ಞಾನಿಗಳು ಕಾರ್ಯ ಮಾಡುತ್ತಿರುವರೆಂದು ಅರಿತರು ; 2 ನೇ ಪ್ರಪಂಚ ಯುದ್ಧದಲ್ಲಿ ಶೋಧನೆಯ ಅದ್ಭುತ ಶಕ್ತಿಯನ್ನು ಕಂಡರು.